
ಅವರ ಸಾವಿನ ನಂತರದಲ್ಲಿ ಮಾನವೀಯ ಸಂಬಂಧಗಳ ಹುಡುಕಾಟಕ್ಕೆ ಕಾರಣವಾಗುತ್ತದೆ. ಜೀವಂತ ಇದ್ದಾಗ ಸರಿಯಾಗಿ ನೋಡಿಕೊಳ್ಳದ ಮಾಸ್ತರರ ಹಿರಿಯ ಮಗ ಶಿವರುದ್ರನಿಗೆ, ಅಪ್ಪ ತನ್ನ ತಂಗಿ ಸುನಂದಾಳಿಗೆ ಆಸ್ತಿಯಲ್ಲಿ ಸಮಪಾಲು ಕೊಟ್ಟಿದ್ದಕ್ಕೆ ಇರಿಸುಮುರಿಸಾಗಿ ತಕರಾರು ಎತ್ತುತ್ತಾನೆ. ಆದರೆ, ಸುನಂದಾ ಆಸ್ತಿಯನ್ನು ಪಡೆಯಲು ನಿರಾಕರಿಸುವ ಮೂಲಕ ಹೃದಯಶ್ರೀಮಂತಿಕೆ ಮೆರೆಯುತ್ತಾಳೆ. ತಾಂತ್ರಿಕವಾಗಿ ಅಲ್ಲದಿದ್ದರೂ ಮನುಷ್ಯತ್ವವನ್ನು ಪೋಷಿಸುವ ಕಾರಣದಿಂದ ಈ ಕಥೆ ಗೆದ್ದಿದೆ.

'ಮೂರನೇ ಪ್ಯಾರಾ' ಕಥೆಗೆ ಪೂರಕವಾಗಿ 'ತಂತು' ಕಥೆಯಿದೆ. ಕೆಲವೊಮ್ಮೆ ರಕ್ತಸಂಬಂಧವನ್ನು ಮೀರಿ ಮಾನವೀಯ ಸಂಬಂಧವೇ ಹೇಗೆ ಮುಖ್ಯವಾಗುತ್ತದೆ ಎನ್ನುವುದನ್ನು ಈ ಕಥೆ ವಿವರಿಸುತ್ತದೆ. ಕಥೆಯಲ್ಲಿ ಬರುವ ಮೂರು ಪಾತ್ರಗಳ (ಗಂಗಪ್ಪ -ಪಾರ್ವತಿ ಹಾಗೂ ಮಹೇಶ್) ಮಧ್ಯೆ ತಂದೆ-ತಾಯಿ ಹಾಗೂ ಮಗ ಎಂಬ ಬಂಧವಿದೆ. ಮನೆಯ ಯಜಮಾನ ಗಂಗಪ್ಪನ ಕುಡಿತದ ಚಟದಿಂದಾಗಿ ಹೊಂದಾಣಿಕೆ ಇಲ್ಲವಾಗಿ ಇದೊಂದು ತೆರದಲಿ ವಿಘಟಿತ ಸಂಬಂಧವೇ ಆಗಿಹೋಗಿದೆ. ಗಂಗಪ್ಪ ಮನೆಯನ್ನು ತೊರೆದು ಮತ್ತೊಂದು ಮದುವೆ ಆಗುವುದರ ಮೂಲಕ ಪಾರ್ವತಿ ಮತ್ತು ಮಹೇಶ್‌ನನ್ನು ಸಂಕಷ್ಟಕ್ಕೀಡು ಮಾಡುತ್ತಾನೆ. ಕಾಲಾಂತರದಲ್ಲಿ ಈ ಅನಾಥಪ್ರಜ್ಞೆಯೇ ಮಹೇಶನನ್ನು ಎತ್ತರಕ್ಕೆ ಕೊಂಡೊಯ್ದು ಅರಣ್ಯಾಧಿಕಾರಿಯನ್ನಾಗಿಸುತ್ತದೆ. ಮುಂದೆ ಕಥೆ ತಿರುವುಗಳನ್ನು ಪಡೆಯುತ್ತದೆ. ಗಂಗಪ್ಪನ ಎರಡನೇ ಹೆಂಡತಿಗೆ ಜನಿಸಿದ ಗಂಗಾಧರನಿಂದಾಗಿ ಮಹೇಶ್ ಅನೇಕ ತೊಂದರೆಗಳನ್ನು ಅನುಭವಿಸುತ್ತಾನೆ. ಆದರೂ ಮಹೇಶನನ್ನು ಅದಾವುದೋ ಒಂದು ತಂತು ಗಂಗಾಧರನ ಉಪಟಳವನ್ನೆಲ್ಲ ಸಹಿಸುವಂತೆ ಮಾಡಿರುತ್ತದೆ. ಆ ತಂತು ಯಾವುದು ಎಂಬುದೇ ಈ ಕಥೆಯ ತಿರುಳು. ಅಂತಃಕರಣ ಪ್ರೇರಿತ ಸಂಬಂಧ ಹೇಗೆ ಮುಖ್ಯವಾಗುತ್ತದೆ ಎಂಬುದನ್ನು ಕಥೆ ಸಾಬೀತು ಪಡಿಸುತ್ತದೆ.

ಕಥೆಗಾರರು ತಮ್ಮ ಕಥೆಗೆ ಒದಗಿ ಬರುವ ವಸ್ತು, ಸಂಗತಿ ಹಾಗೂ ಘಟನೆಗಳನ್ನು ಆಯ್ದುಕೊಳ್ಳುವಾಗ ತುಂಬಾ ಎಚ್ಚರಿಕೆಯನ್ನು ವಹಿಸುತ್ತಾರೆ. ಇದು ಅವರು ಲೋಕವನ್ನು ನೋಡುವ, ನೋಡಿದ ಲೋಕದ




ಹವೇಲಿ ದೊರೆಸಾನಿ
ಲೇ: ಮಲ್ಲಿಕಾರ್ಜುನ ಶೆಲ್ಲಿಕೇರಿ
ಪು: 144; ಬೆ: ರೂ. 175
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು.
ಫೋನ್: 94486 76770.

ಸಂಗತಿಯ ಕುರಿತಾಗಿ ವಿಭಿನ್ನ ರೀತಿಯಲ್ಲಿ ಗ್ರಹಿಸುವ, ಹಾಗೆ ಗ್ರಹಿಸಿದ ಸಂಗತಿಯನ್ನು ಕಥೆಯಾಗಿಸುವ ಮನೋಧರ್ಮಕ್ಕೆ ಸಾಕ್ಷಿಯಾಗಿದೆ. ಈ ಮಾತಿಗೆ ಪೂರಕವಾಗಿ 'ಗ್ರೀನ್ ರೂಮ್' ಗಮನಿಸಬಹುದು. ನಶಿಸಿಹೋಗುತ್ತಿರುವ ವೃತ್ತಿರಂಗಭೂಮಿಯ ಕಲಾವಿದರ ಬದುಕು ಆರ್ಥಿಕವಾಗಿ ಹೇಗೆಲ್ಲ ಜರ್ಝರಗೊಂಡಿದೆ ಎಂಬ ಸೂಕ್ಷ್ಮ ವಿಚಾರವನ್ನು ಈ ಕಥೆ ಓದುಗನಿಗೆ ದಾಟಿಸುತ್ತದೆ. ಫಕೀರಪ್ಪ, ಸುಖನ್ಯಾ, ಬಶೀರ್ ಹಾಗೂ ಮಾಲತೇಶರ ಬದುಕಿನ ದೈನ್ಯತೆ ಓದುಗನನ್ನು ತಟ್ಟುತ್ತದೆ. ಕಲಾವಿದರ ಬದುಕಿನಲ್ಲಿ ಆಗಿರುವ ಬದಲಾವಣೆಯಂತೆಯೂ ಸಮಾಜ ಹಾಗೂ ರಂಗಭೂಮಿಯಲ್ಲಿ ಆಗಿರುವ ಪಲ್ಲಟಗಳನ್ನೂ ಕಥೆ ಒರೆಗೆ ಹಚ್ಚುತ್ತದೆ. ಇಲ್ಲಿನ 'ಗ್ರೀನ್ ರೂಮ್' ಕಲಾವಿದರ ಪ್ರಸಾದನ ಕೋಣೆಯಷ್ಟೇ ಆಗಿರದೆ, ಅವರ ನೋವು ನಿಟ್ಟುಸಿರುಗಳಿಗೆ ಸಮಾಧಾನ ಹೇಳುವ ಸಾಂತ್ವನ ಕೇಂದ್ರವೂ ಆಗಿದೆ.